## ೧೧.೧೧.೨೦೧೩ರಂದು ನಡೆದ ಪ್ರಶಾಸನ ಸಮಿತಿ ೧೭ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೧೭ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನವೆಂಬರ್ ೧೧, ೨೦೧೩ರ ಸೋಮವಾರ ಮಧ್ಯಾಹ್ನ ೦೩.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಕೆ.ಆರ್. ರಾಮಕೃಷ್ಣ,** ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಶ್ರೀ ಬಿ.ಎ. ರಾಜಶೇಖರ್,** ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೫. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೬. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೭. | **ಪ್ರೊ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ, ಕಸಂವಿ | ಸದಸ್ಯರು |
| ೮. | **ಪ್ರೊ. ಪಿ.ಬಿ. ಸಂತಪ್ಪನವರ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಜಂಟಿ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೬. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. | **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಶಾಸ್ತ್ರ ನಿಕಾಯ, ಕಸಂವಿ | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಹದಿನಾರನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 10.10.2013ರಂದು ನಡೆದ ಪ್ರಶಾಸನ ಸಮಿತಿ ಹದಿನಾರನೆಯ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರನ್ನಾಗಿ ಶ್ರೀ ಶಾಂತಕುಮಾರ್ ಅವರನ್ನು ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರನ್ನಾಗಿ ಶ್ರೀ ಸಿ. ವೆಂಕಟೇಶ್ ಅವರನ್ನು ನೇಮಕ ಮಾಡಿ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಭತ್ಯೆಗಳನ್ನು ಪಾವತಿಸಲಾಗಿದೆ. **ವಿಷಯ ಸಂಖ್ಯೆ 6**ಕ್ಕೆ ಸಂಬಂಧಿಸಿದಂತೆ ಅನುಕಂಪದ ಆಧಾರದ ಮೇಲೆ ಶ್ರೀ ಎಂ. ಗುರುಮೂರ್ತಿ ಇವರನ್ನು ನೇಮಕ ಮಾಡಿಕೊಂಡಿರುವುದಕ್ಕೆ ಒಪ್ಪಿಗೆ ನೀಡಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯ ಸಂಖ್ಯೆ 1ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗುತ್ತಿದೆ. ವಿಷಯ ಸಂಖ್ಯೆ 3ಕ್ಕೆ ಸಂಬಂಧಿಸಿದಂತೆ ವಿಶ್ರಾಂತಿಗೃಹ ಮೇಲ್ವಿಚಾರಕ ಹುದ್ದೆಗೆ ಹಾಜರಾಗಿದ್ದಾರೆ ಮತ್ತು ಗ್ರೂಪ್ ಡಿ (ಕಾವಲುಗಾರ) ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಲ್ಲಿ ಒಬ್ಬರು ಹುದ್ದೆಗೆ ಹಾಜರಾಗಿದ್ದಾರೆ. ಇನ್ನೊಬ್ಬರು ಸಲ್ಲಿಸಿರುವ ಏಳನೇ ತರಗತಿ ಅಂಕಪಟ್ಟಿಯಲ್ಲಿ ದೋಷ ಇರುವುದರಿಂದ ಪರಿಶೀಲನೆಗಾಗಿ ಸಂಬಂಧಿಸಿದ ಶಾಲೆಗೆ ಪತ್ರ ಬರೆಯಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿತು. ಗ್ರೂಪ್ ಡಿ (ಕಾವಲುಗಾರ) ಹುದ್ದೆಗೆ ಸಂಬಂಧಿಸಿದಂತೆ ಅಂಕಪಟ್ಟಿಯ ದೋಷಕ್ಕೆ ಆ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪತ್ರ ಬರೆದು ವರದಿಯನ್ನು ತರಿಸಿಕೊಂಡು ಕ್ರಮವಹಿಸಲು ಸಭೆ ಸೂಚಿಸಿತು. ಉಳಿದ ವಿಷಯಗಳಿಗೆ ಅನುಮೋದನೆಯನ್ನು ನೀಡಿತು.**

**ವಿಷಯ 2: ಘಟಕ ಕಾಲೇಜು ಆವರಣದಲ್ಲಿರುವ ಕೊಳವೆಬಾವಿಗೆ ನೂತನ ಸಬ್‌ಮರ್ಸಿಬಲ್ ಪಂಪ್‌ಸೆಟ್ ಅಳವಡಿಸಿರುವ ವೆಚ್ಚಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಪ್ರಸ್ತುತ ವಿಶ್ವವಿದ್ಯಾಲಯವು ಬೆಂಗಳೂರಿನ ಘಟಕ ಕಾಲೇಜಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಾಲೇಜಿನ ಸಿಬ್ಬಂದಿಗಳು, ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿಗಳು ದೈನಂದಿನ ಬಳಕೆಗಾಗಿ ಘಟಕ ಕಾಲೇಜಿನ ಆವರಣದಲ್ಲಿರುವ ಕೊಳವೆಬಾವಿಯನ್ನೇ ಆಧರಿಸಿದೆ. ಈ ಕೊಳವೆಬಾವಿಯು ಜೆಟ್ ಪಂಪ್‌ಸೆಟ್‌ಅನ್ನು ಹೊಂದಿದ್ದು, ಹವಾಮಾನ ವೈಪರೀತ್ಯದ ಕಾರಣದಿಂದಾಗಿ ಇದು ಪದೇ ಪದೇ ದುರಸ್ತಿಗೊಳಗಾಗುತ್ತಿತ್ತು. ಈ ಯಂತ್ರವು ತುಂಬಾ ಹಳೆಯದಾಗಿದ್ದು, ದುರಸ್ತಿ ಮಾಡಲು ಸಾಧ್ಯವಾಗದ ಕಾರಣ, ಈ ಕೊಳವೆಬಾವಿಗೆ ನೂತನ ಸಬ್‌ಮರ್ಸಿಬಲ್ ಪಂಪ್‌ಸೆಟ್‌ಅನ್ನು ಅಳವಡಿಸಲಾಗಿದೆ. ಇದಕ್ಕೆ ಒಟ್ಟಾರೆ **ರೂ. 22,017/–**ಗಳನ್ನು (ಪಂಚ್‌ಸೆಟ್ ಮೊತ್ತ, ಬಿಡಿಭಾಗಗಳು ಮತ್ತು ಸೇವಾಶುಲ್ಕ ಸೇರಿದಂತೆ) ವೆಚ್ಚ ಮಾಡಲಾಗಿದ್ದು, ಈ ಮೊತ್ತಕ್ಕೆ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಮೇಲ್ಕಂಡ ವಿಷಯಕ್ಕೆ ವೆಚ್ಚವಾದ ರೂ. 22,017/– ಮೊತ್ತಕ್ಕೆ ಅನುಮೋದನೆಯನ್ನು ನೀಡಿತು.**

**ವಿಷಯ 3: ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರ ನಿಯೋಜನೆಗೆ ಉಪಸಮಿತಿಯನ್ನು ರಚಿಸುವುದರ ಬಗೆಗೆ.**

ಟಿಪ್ಪಣಿ: ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಕಾಲೇಜುಗಳಲ್ಲಿ ಪಾಠಶಾಲಾ ಹಂತದ ಪ್ರಥಮಾ ತರಗತಿಯಿಂದ ಸಾಹಿತ್ಯದ ತರಗತಿಗಳವರೆಗೂ ಬೋಧನೆ ನಡೆಯುತ್ತಿದ್ದು, ಸಂಸ್ಕೃತ ಪಾಠಶಾಲೆಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ಕಾಲೇಜುಗಳಿಂದ ಪ್ರತ್ಯೇಕಪಡಿಸಬೇಕಾದ ಹಿನ್ನೆಲೆಯಲ್ಲಿ ದಿನಾಂಕ: 26.09.2012ರಂದು ನಡೆದ ಪ್ರಶಾಸನ ಸಮಿತಿ 7ನೇ ಸಭೆ ಹಾಗೂ ದಿನಾಂಕ: 17.10.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 5ನೇ ಸಭೆಯಲ್ಲಿ ಅನುಮೋದನೆಯನ್ನು ಪಡೆದುಕೊಂಡು ಕಾಲೇಜು ಹಾಗೂ ಪಾಠಶಾಲೆಗಳನ್ನು ಪ್ರತ್ಯೇಕಗೊಳಿಸಲಾಗಿದೆ. ಆದರೆ, ಈ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಅಧ್ಯಾಪಕರ ನಿಯೋಜನೆಗೆ ಸಂಬಂಧಿಸಿದಂತೆ ಕೆಲವು ತಾಂತ್ರಿಕ ಸಮಸ್ಯೆಗಳು ಉಂಟಾಗಿದ್ದು, ಇವುಗಳ ಪರಿಹಾರಕ್ಕಾಗಿ ಒಂದು ಉಪಸಮಿತಿಯನ್ನು ರಚಿಸಿ ಸೂಕ್ತ ನಿಯಮವೊಂದನ್ನು ರೂಪಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಉಪಸಮಿತಿ ರಚನೆಗೆ ಸಂಬಂಧಿಸಿದಂತೆ ಚರ್ಚಿಸಲು ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ಎಲ್ಲ ವಿಷಯಗಳನ್ನು ತಂದರು. ಈ ಹಿನ್ನೆಲೆಯಲ್ಲಿ ಕೆಳಕಂಡ ಮೂವರು ಸದಸ್ಯರನ್ನು ಒಳಗೊಂಡ ಉಪಸಮಿತಿಯನ್ನು ಸಭೆ ರಚಿಸಿತು. ಈ ಸಮಿತಿಯು ಕಾಲೇಜುಗಳ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನು ಕರೆದು ವಿವರವಾಗಿ ಚರ್ಚಿಸಿ ವರದಿಯೊಂದನ್ನು ನೀಡಲು ಸೂಚಿಸಿತು. ಆ ವರದಿಯನ್ನು ಪ್ರಶಿಕ್ಷಣ ಪರಿಷತ್ತಿನ ಮುಂದೆ ಮಂಡಿಸಿ, ಅನಂತರ ಪ್ರಶಾಸನ ಸಮಿತಿಯ ಮುಂದೆ ಮಂಡಿಸಬಹುದೆಂದು ಸಭೆಯು ನಿರ್ಣಯಿಸಿತು.**

1. **ಡಾ. ಜಯತೀರ್ಥಾಚಾರ್ಯ ಮಳಗಿ, ಸದಸ್ಯರು, ಪ್ರಶಾಸನ ಸಮಿತಿ — ಅಧ್ಯಕ್ಷರು**
2. **ವಿದ್ವಾನ್ ಶ್ರೀನಿವಾಸಮೂರ್ತಿ, ಸದಸ್ಯರು, ಪ್ರಶಿಕ್ಷಣ ಪರಿಷತ್ತು — ಸದಸ್ಯರು**
3. **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ, ವಿಶ್ರಾಂತ ಪ್ರಾಂಶುಪಾಲರು — ಸದಸ್ಯರು**
4. **ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ — ಕಾರ್ಯದರ್ಶಿ**

**ವಿಷಯ 4: ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರಥಮಾ ಮತ್ತು ಕಾವ್ಯ ತರಗತಿಗಳಿಗೆ ಬೋಧಿಸುತ್ತಿರುವ ಶಿಕ್ಷಕರಿಗೆ ತರಬೇತಿ ವೇತನಶ್ರೇಣಿಯಲ್ಲಿ ವೇತನ ನಿಗದಿಗೊಳಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 16.05.2012ರಂದು ನಡೆದ 4ನೇ ಪ್ರಶಾಸನ ಸಮಿತಿಯ ಹಾಗೂ ಹಣಕಾಸು ಸಮಿತಿ 8ನೇ ಸಭೆಯ ಅನುಮೋದನೆಯಂತೆ ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರಥಮಾ ಮತ್ತು ಕಾವ್ಯ ತರಗತಿಗಳನ್ನು ಬೋಧಿಸುತ್ತಿರುವ ಶಿಕ್ಷಕರುಗಳಿಗೆ ತರಬೇತಿ ವೇತನ ಶ್ರೇಣಿಯನ್ನು ಈಗಾಗಲೇ ಒಂದನೇ ಹಂತದಲ್ಲಿ ಬಿ.ಇಡಿ, ಟಿ.ಸಿ.ಹೆಚ್, ಶಿಕ್ಷಾಶಾಸ್ತ್ರಿ ತರಬೇತಿ ಹೊಂದಿದ 60 ಶಿಕ್ಷಕರಿಗೆ ನೀಡಲಾಗಿದೆ. ಎರಡನೇ ಹಂತದಲ್ಲಿ ದಿನಾಂಕ: 08.05.2013ರ ಹಣಕಾಸು ಸಮಿತಿ 10ನೇ ಸಭೆಯ ಅನುಮೋದನೆಯಂತೆ ಹಿಂದೀಶಿಕ್ಷಕ್, ಶಿಕ್ಷಸ್ನಾತಕ್, ಹಿಂದೀ ಬಿ.ಇಡಿ. ತರಬೇತಿ ಹೊಂದಿದ 18 ಜನ ಶಿಕ್ಷಕರಿಗೆ ತರಬೇತಿ ವೇತನಶ್ರೇಣಿ ನೀಡಲಾಗಿದೆ. ಇದರನ್ವಯ ಉಳಿದಂತೆ ಈ ಕೆಳಕಂಡ 07 ಸಂಸ್ಕೃತ ಪಾಠಶಾಲೆಗಳ 12 ಜನ ಶಿಕ್ಷಕರುಗಳಿಗೆ ತರಬೇತಿ ವೇತನಶ್ರೇಣಿ ನೀಡಬೇಕಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರ. ಸಂ. | ಶಾಲೆಯ ಹೆಸರು ಮತ್ತು ವಿಳಾಸ | ಶಿಕ್ಷಕರ ಹೆಸರು | ತರಬೇತಿ ವಿವರ ಮತ್ತು ವರ್ಷ | ಹಾಲಿಪಡೆಯುತ್ತಿರುವ ವೇತನ/ ವೇತನ ಶ್ರೇಣಿ | ತರಬೇತಿ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿದ ವೇತನ/ವೇತನ ಶ್ರೇಣಿ |
|---|---|---|---|---|---|
| 1. | **ಶ್ರೀ ಶಿವಕುಮಾರಸ್ವಾಮೀಜಿ ಸಂಸ್ಕೃತ ವೇದ ಪಾಠಶಾಲೆ,** ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು | ಹೆಚ್.ಎ.ಕುಮಾರ್ | ಶಿಕ್ಷಾಸ್ನಾತಕ್ 2007 | 18100 13600–26000 | 18550 14550–26700 |
| | | ಎಂ.ಸಿ.ಯೋಗೇಶ್ | ಬಿ.ಇಡಿ 2012 | 11800 11600–21000 | 13600 13600–26000 |
| | | ಜಿ.ವಿ.ಮನೋಹರ | ಟಿ.ಸಿ.ಹೆಚ್ 1988 | 17650 13600–26000 | 18100 14550–26700 |

| | | | | | |
|---|---|---|---|---|---|
| | | ಎಲ್.ಶಿವಕುಮಾರ್ | ಬಿ.ಇಡಿ 1992 | 17200 13600–26000 | 17650 14550–26700 |
| 2. | **ಶ್ರೀಉದ್ದಾನೇಶ್ವರ ಸಂಸ್ಕೃತ ವೇದ ಪಾಠಶಾಲೆ,** ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು | ಕೆ.ಎಸ್.ಸುರೇಶ್ | ಬಿ.ಇಡಿ 2011 | 11800 11600–21000 | 13600 13600–26000 |
| | | ಶ್ರೀಮತಿ ಶೋಭ | ಬಿ.ಇಡಿ 2009 | 11800 11600–21000 | 13600 13600–26000 |
| 3. | **ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಪಾಠಶಾಲೆ** ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾ॥. ಮಂಡ್ಯ ಜಿಲ್ಲೆ. | ಕೃಷ್ಣಮೂರ್ತಿ | ಬಿ.ಇಡಿ 1994 | 24600 14550–26700 | 25300 16000–29600 |
| | | ಟಿ.ಎಸ್.ಮೂರ್ತಿ | ಬಿ.ಇಡಿ 1995 | 22200 14550–26700 | 22800 16000–29600 |
| 4. | **ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಪಾಠಶಾಲೆ**, ಬೆಕ್ಕಿನಕಲ್ಮಠ,ಶಿವಮೊಗ್ಗ | ಕಾವ್ಯಶ್ರೀ | ಡಿ.ಇಡಿ 2010 | 11600 11600–21000 | 13600 13600–26000 |
| 5. | **ಶ್ರೀ ಮದ್ ಜಗದ್ಗುರು ಶಂಕರ ಶಿವಾಚಾರ್ಯ ಸಂಸ್ಕೃತ ಪಾಠಶಾಲೆ ಗಜೇಂದ್ರಗಡ, ರೋಣ ತಾ॥, ಗದಗ ಜಿಲ್ಲೆ** | ಈಶ್ವರಪ್ಪ ವಿರೂಪಾಕ್ಷಪ್ಪ ಮಾರನಬಸರಿ | ಹಿಂದೀ ಬಿ.ಇಡಿ 1994 | 20000 14450–26700 | 20500 16000–29600 |
| 6. | **ಸಂಸ್ಕೃತ ವೇದ ಜ್ಯೋತಿಷ್ಯ ಪಾಠಶಾಲೆ,** ಬೀರೂರು, ಕಡೂರು ತಾ॥ ಚಿಕ್ಕಮಗಳೂರು | ಸುಬ್ರಹ್ಮಣ್ಯ ಎಸ್ | ಬಿ.ಇಡಿ | 11600 11600–21000 | 13600 13600–26000 |
| 7. | **ಜೆ.ಎಸ್.ಎಸ್.ಸಂಸ್ಕೃತ ಪಾಠಶಾಲೆ ಸುತ್ತೂರು** ನಂಜನಗೂಡು ತಾ॥, ಮೈಸೂರು ಜಿಲ್ಲೆ. | ಎಸ್. ಚಂದ್ರಮೌಳೇಶ್ವರ | ಬಿ.ಇಡಿ 2006 | 11600 11600–21000 | 13600 13600–26000 |

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. ಒಟ್ಟು 12 ಸಹಶಿಕ್ಷಕರಿಗೆ ತರಬೇತಿ ವೇತನಶ್ರೇಣಿ ನೀಡಲು ಅನುಮೋದನೆಯನ್ನು ನೀಡಿತು.**

### ವಿಷಯ 5: ಯುಜಿಸಿ ವೇತನಶ್ರೇಣಿಯ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.

ಟಿಪ್ಪಣಿ: ದಿನಾಂಕ: 26.05.2013ರಂದು ನಡೆದ ಪ್ರಶಾಸನ ಸಮಿತಿ 14ನೇ ಸಭೆಯ ಅನುಮೋದನೆಯಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸೃಜಿಸಿರುವ **ಬೋಧಕ ಹುದ್ದೆ**ಗಳ ಪೈಕಿ ಯುಜಿಸಿ ವೇತನಶ್ರೇಣಿಯ 12 ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ದಿನಾಂಕ 30.05.2013ರಂದು ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಸಲ್ಲಿಸಿದ ಅಭ್ಯರ್ಥಿಗಳ ಅರ್ಜಿಗಳ ಪರಿಶೀಲನಕಾರ್ಯ ಮುಕ್ತಾಯಗೊಂಡಿದ್ದು, ಅರ್ಹ ಅಭ್ಯರ್ಥಿಗಳಿಗೆ ದಿನಾಂಕ 2013ರ ನವೆಂಬರ್ 7, 8 ಮತ್ತು 9ರಂದು ಸಂದರ್ಶನವನ್ನು ನಡೆಸಲಾಯಿತು. ಈ ಆಯ್ಕೆ ಸಮಿತಿ ಸಂದರ್ಶನದ ಶಿಫಾರಸ್ಸುಗಳನ್ನು ಅನುಮೋದಿಸಲು ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ಸಭೆಯ ಮುಂದೆ ಯುಜಿಸಿ ವೇತನಶ್ರೇಣಿಯ ಬೋಧಕ 'ಸಹಾಯಕ ಪ್ರಾಧ್ಯಾಪಕ' ಹುದ್ದೆಗಳಿಗೆ 2014ರ ಜನವರಿ 07, 08 ಮತ್ತು 09ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಮಾನ್ಯ ಕುಲಪತಿಗಳು ಮಂಡಿಸಿದರು. ಒಂದೊಂದು ನಿಕಾಯಗಳಿಗೆ ಯೋಜನೆ, ಸಂಶೋಧನೆ ಮತ್ತು ಬೋಧನೆ –ಇವುಗಳಿಗೆ ಅನುಗುಣವಾಗಿ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹೊರಡಿಸಿದ ಅಧಿಸೂಚನೆಯ ಅನ್ವಯ ಹಾಗೂ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆಗೊಂಡ** 'Statute Governing the Appointment of Professor, Associate Professor, Assistant Professor and Librarians & conduct of Interview to Teaching, Academic Staff & Other Allied posts under section 38(II) of the Karnataka Samskrit University Act, 2009' **(ಸಂಖ್ಯೆ: ಇಡಿ 8 ಯುಡಿಎಸ್ 2012; ದಿನಾಂಕ: 20.03.2013)ರ** Sec. 7.1; 9.1; 10; 11; 12 & 16 **ಇವುಗಳಲ್ಲಿರುವ ಎಲ್ಲಾ ನಿಯಮಗಳನ್ನು ಸಭೆಯ ಮುಂದೆ ಮಾನ್ಯ ಕುಲಪತಿಗಳು ಮಂಡಿಸಿದರು. ಆಯ್ಕೆ ಸಮಿತಿಯು ಸಂಪೂರ್ಣವಾಗಿ ಎಲ್ಲ ವಿವರಗಳನ್ನು ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಶೈಕ್ಷಣಿಕ ಅರ್ಹತೆ, ಸಂಶೋಧನಾ ಅನುಭವ ಹಾಗೂ ಇತರೆ ಅರ್ಹತೆಗಳನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆ ತನ್ನ ಅನುಮೋದನೆಯನ್ನು ನೀಡಿತು.**

| ಕ್ರ.ಸಂ. | ನಿಕಾಯ | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|---|
| **01.** | ಭಾಷಾ ನಿಕಾಯ | **ಡಾ. ವಿನಾಯಕ ನಾಮಣ್ಣವರ** ಮನೆ ನಂ. 48, ವಿನಾಯಕನಗರ 1ನೇ ಅಡ್ಡರಸ್ತೆ ಶಂಕರನಾಗ್ ವೃತ್ತದ ಹತ್ತಿರ, ಬೆಂಗಳೂರು – 560050. | ಸಾಮಾನ್ಯ |
| **02.** | ಭಾಷಾ ನಿಕಾಯ | **ಡಾ. ಕೃಷ್ಣ ಜೋಶಿ** 'ಭಾಮತಿ ಬಿಲ್ಡಿಂಗ್', ಬೇಂದ್ರೆ ಮಾರ್ಗ, ಸಾಧನಕೇರಿ ಧಾರವಾಡ – 580008. | ಸಾಮಾನ್ಯ |
| **03.** | ಭಾಷಾ ನಿಕಾಯ | **ಶ್ರೀ ಪರಿತೋಷ್ ದಾಸ್** ನಂ. 256(ಹಳೆ), ಬ್ರಹ್ಮಪುತ್ರ ವಿದ್ಯಾರ್ಥಿನಿಲಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ ನವದೆಹಲಿ – 110067 | ಪರಿಶಿಷ್ಟ ಜಾತಿ |
| **04.** | ಭಾಷಾ ನಿಕಾಯ | **ಡಾ. ರೇಖಾದೇವಿ ಎಸ್.ಎಚ್.** W/o. ಎಂ.ಎಸ್. ಶ್ರೀನಿವಾಸ ಎಸ್.ಆರ್. ರಸ್ತೆ, 2ನೇ ಅಡ್ಡರಸ್ತೆ, ಗಾಂಧಿನಗರ ಚಳ್ಳಕೆರೆ – 577522, ಚಿತ್ರದುರ್ಗ ಜಿಲ್ಲೆ | ಪರಿಶಿಷ್ಟ ಪಂಗಡ |

| 05. | ಶಾಸ್ತ್ರ ನಿಕಾಯ | ಶ್ರೀ ಭಾಸ್ಕರ ಭಟ್ಟ ಜೋಶಿ<br>C/o. ಇಂದಿರಾದೇವಿ ಜಿ.<br>ನಂ. 52/3, 4ನೇ ಮುಖ್ಯರಸ್ತೆ, ಸಮೀರಪುರ<br>ಚಾಮರಾಜಪೇಟೆ, ಬೆಂಗಳೂರು – 560018. | ಸಾಮಾನ್ಯ |
|---|---|---|---|
| 06. | ಶಾಸ್ತ್ರ ನಿಕಾಯ | ಡಾ. ಮಂಜುನಾಥ ಭಟ್ಟ<br>ಇ.ಎಫ್.ಇ.ಒ., 19, ಡಮಾಸ್ ಸ್ಟ್ರೀಟ್, ಪಾಂಡಿಚೇರಿ – 605001. | ಸಾಮಾನ್ಯ |
| 07. | ಶಾಸ್ತ್ರ ನಿಕಾಯ | ಶ್ರೀ ಋಷಿದೇವ್ ಭಾರ್ಗವ ಎನ್.<br>C/o. ಡಾ. ವಸುಂಧರಾ ಫಿಲ್ಲಿಯೋಝತ್<br># 125, ವಿವೇಕಾನಂದ ರಸ್ತೆ ಅಡ್ಡರಸ್ತೆ<br>ಯಾದವಗಿರಿ, ಮೈಸೂರು – 570020 | ಪ್ರವರ್ಗ 2ಎ |
| 08. | ಶಾಸ್ತ್ರ ನಿಕಾಯ | ಅನುಪಮಾ ಬಿ.<br>ನಂ. 975/1ಜಿ, ಜಯಲಕ್ಷ್ಮೀ ವಿಲಾಸ ರಸ್ತೆ<br>ಚಾಮರಾಜಪುರಂ, ಮೈಸೂರು – 570005 | ಪ್ರವರ್ಗ 1 |
| 09. | ವೇದಾಂತ ನಿಕಾಯ | ಡಾ. ವಿನಯ್ ಪಿ.<br>ನಂ. 291, 52ನೇ ಅಡ್ಡರಸ್ತೆ, ರಾಜಾಜಿನಗರ 4ನೇ ಹಂತ<br>ಬೆಂಗಳೂರು – 560010 | ಸಾಮಾನ್ಯ |
| 10. | ವೇದಾಂತ ನಿಕಾಯ | ಡಾ. ಶರತ್‌ಚಂದ್ರ ಸ್ವಾಮಿ<br>ನಂ. 113, ಶ್ರೀ ಕುಂದೂರು ಮಠ, ಶ್ರೀ ಕುಂದೂರು ಮಠದ ರಸ್ತೆ,<br>ಫೋರ್ಟ್ ಮೊಹಲ್ಲಾ, ಮೈಸೂರು – 570004 | ಸಾಮಾನ್ಯ |

ಪರಿಶಿಷ್ಟ ಜಾತಿ ಹಾಗೂ ಪ್ರವರ್ಗ 2ಬಿ –ಈ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂದು ಸಭೆ ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**ವಿಷಯ 1: ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಮುಂದೂಡಲಾಗಿರುವ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸೃಜನೆಗೊಂಡಿರುವ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ಪೈಕಿ **37 ಹುದ್ದೆಗಳನ್ನು** ತುಂಬಿಕೊಳ್ಳಲು ದಿನಾಂಕ: 16.06.2012ರಂದು ನಡೆದ ಪ್ರಶಾಸನ ಸಮಿತಿ 5ನೇ ಸಭೆಯಲ್ಲಿ ಅನುಮೋದನೆಯನ್ನು ಪಡೆದುಕೊಂಡು ದಿನಾಂಕ: 16.07.2012ರಂದು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಈ ಅಧಿಸೂಚನೆಯನ್ವಯ ಕೆಲವು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ದೊರೆಯದ ಕಾರಣ ನೇಮಕಾತಿ ಮಾಡದೇ ಮುಂದೂಡಲಾದ ಹುದ್ದೆಗಳಿಗೆ ದಿನಾಂಕ: 10.01.2013ರಂದು ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಲಾಯಿತು. ಈ ಅಧಿಸೂಚನೆಯನ್ವಯವೂ ಕೆಲವು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಅಲಭ್ಯತೆಯ ಹಿನ್ನೆಲೆಯಲ್ಲಿ ಮತ್ತೊಮ್ಮೆ ದಿನಾಂಕ: 28.05.2013ರಂದು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಆದರೂ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸದ ಹಿನ್ನೆಲೆಯಲ್ಲಿ ಇನ್ನು ಕೆಲವು ಹುದ್ದೆಗಳು ಖಾಲಿ ಇರುತ್ತವೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಆಗದೇ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತುಂಬಿಕೊಳ್ಳಲು ಹೊಸದಾಗಿ ಅಧಿಸೂಚನೆಯನ್ನು ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ. | ಹುದ್ದೆಯ ಹೆಸರು ಮತ್ತು ವೇತನಶ್ರೇಣಿ | ಹುದ್ದೆಗಳ ಸಂಖ್ಯೆ | ಮೀಸಲಾತಿ |
|---|---|---|---|
| 01. | **ಯೋಜನಾ ಸಹಾಯಕರು (ಶೈಕ್ಷಣಿಕ)**; ರೂ. 21600–40050 | 01 | ಪರಿಶಿಷ್ಟ ಪಂಗಡ |
| 02. | **ಉಪ ನಿರ್ದೇಶಕರು**; ರೂ. 36300–53850 | 01 | ಪರಿಶಿಷ್ಟ ಜಾತಿ |
| 03. | **ಸಹಾಯಕ ಕುಲಸಚಿವರು**; ರೂ. 28100–50100 | 01 | ಪರಿಶಿಷ್ಟ ಜಾತಿ |
| 04. | **ಕಂಪ್ಯೂಟರ್ ಆಪರೇಟರ್**; ರೂ. 21600–40050 | 01 | ಸಾಮಾನ್ಯ** |
| 05. | **ಟೆಲಿಫೋನ್ ಆಪರೇಟರ್**; ರೂ. 11600–21000 | 01 | ಪರಿಶಿಷ್ಟ ಜಾತಿ |

ನಿರ್ಣಯ: ಸಭೆಯು ಸರ್ಕಾರದ ನಿಯಮಾನುಸಾರ ಅಧಿಸೂಚನೆಯನ್ನು ಹೊರಡಿಸಿ ಸಂದರ್ಶನವನ್ನು ನಡೆಸಲು ಅನುಮೋದನೆಯನ್ನು ನೀಡಿತು.

11/7/13

ಪ್ರೊ. ಪಿ.ಬಿ. ಸಂತಪ್ಪನವರ
ಸದಸ್ಯ ಕಾರ್ಯದರ್ಶಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು